
ಜಯದೇವನ ಅಮ್ಮ ಹಳ್ಳಿಯಿಂದ ಬಂದು ಸಿಟಿಗೆ ಹೊಂದಿಕೊಳ್ಳದ ಎಡಬಿಡಂಗಿ ಹೆಂಗಸಿನ ಥರ ಇರಬಹುದೇನೊ ಅಂತ ಊಹೆ ಮಾಡಿದ್ದ ತನ್ಮಯಿಗೆ ಅವರನ್ನು ನೋಡಿ ಆಶ್ಚರ್ಯವಾಯಿತು. ಮನೆಯಲ್ಲಿ ಇನ್ಯಾರಾದರೂ ಕಾಣಬಹುದೇ ಅಂತ ಅವಳ ಕಣ್ಣುಗಳು ಹುಡುಕಾಡಿದವು.

'ಮನೆಯಲ್ಲಿ ಇರೋದು ನಾವಿಬ್ಬರೇ. ದೊಡ್ಡ ಮನೆಯಲ್ಲಿ ತುಂಬಾ ಜನರು ಇದ್ದರೆ ಚೆನ್ನ. ಬನ್ನಿ' ಎನ್ನುತ್ತ ಎದುರಿನ ಸೋಫಾ ಕಡೆಗೆ ಕೈ ತೋರಿಸುತ್ತ ತನ್ಮಯಿ ಕೂರುವ ಮೊದಲೇ ಕೂತರು. ಕೆಲವು ಸೆಕೆಂಡು ಇಬ್ಬರ ನಡುವೆ ಮೌನ. ಆಮೇಲೆ ಅದೂ ಇದೂ ಮಾತು. ಇನ್ನೇನು ಮಾತಾಡುವುದು ಹೊಸಬರ ಜತೆ. ಕುಶಲೋಪರಿ ಮಾತುಗಳೂ ಮುಗಿದ ಮೇಲೆ ಅನ್ನಿಸಿತು ತನ್ಮಯಿಗೆ.

'ಜಯನಿಗೆ ಮೂವತ್ತೈದು, ಅವನ ಅರ್ಧ ಆಯಸ್ಸು ಮುಗಿದೇ ಹೋಯ್ತು. ಅವನಿಗೊಂದು ಮದುವೆ ಆಗಿಬಿಟ್ಟರೆ ನಾನು ನೆಮ್ಮದಿಯಿಂದ ಕಣ್ಣು ಮುಚ್ಚುತ್ತೇನೆ...' ಅಂತ ಎಲ್ಲ ತಾಯಂದಿರ ಹಾಗೆ ಮಾತಾಡಿದ್ದನ್ನು ಕೇಳಿ ತನ್ಮಯಿಗೆ ಅಚ್ಚರಿ.



'ಒಳ್ಳೇ ಕೆಲಸ ಇದೆ, ಮನೆಯಿದೆ. ಹೆಣ್ಣು ಹುಡುಕಿ ಮದುವೆ ಮಾಡಿಬಿಡೋದಲ್ವಾ' ಅನ್ನುತ್ತ ಮುಖ ನೋಡಿದಳು.

'ಇಲ್ಲಮ್ಮ, ಏನೇನೋ ಫ್ಯಾಮಿಲಿ ಪ್ರಾಬ್ಲಂಗಳಿದ್ದವು. ಅವು ತಾವಾಗೇ ಸರಿಹೋಗ್ತಿವೆ. ಈಗಷ್ಟೇ ರಿಲೀಫ್ ಅನ್ನಿಸ್ತಾ ಇದೆ...' ಅಂತ ಒಗಟಿನ ಮಾತಾಡಿದರು. 'ನಾನು ಮದುವೆ ಆಗಲ್ಲ. ಹೀಗೇ ಇದ್ದು ಬಿಡ್ತೀನಿ ಅಂತಿದ್ದ. ನಾನೇ ದಿನವೂ ಮದುವೆ ಮಾಡಿಕೊ ಅಂತ ಒತ್ತಾಯ ಮಾಡ್ತಿದ್ದೀನಿ. ಒಂದೆರಡು ಹೆಣ್ಣು ನೋಡಿದೆ. ನಮಗೆ ಇಷ್ಟವಾಯ್ತು. ಹುಡುಗಿಯ ಅಪ್ಪ ಅಮ್ಮನಿಗೆ ನಮ್ಮ ಸಂಬಂಧ ಇಷ್ಟವಾಗಲಿಲ್ಲ. ಒಬ್ಬರಂತೂ ಎರಡನೇ ಸಂಬಂಧಕ್ಕೆ ಮಗಳನ್ನು ಕೊಡಲ್ಲ ಅಂದು ಬಿಟ್ಟರು. ನಂಗೆ ತುಂಬಾ ನೋವಾಯ್ತು. ನನ್ನ ಮಗನಿಗೆ ಇನ್ನೂ ಮದುವೆ ಆಗಿಲ್ಲ ಅಂದರೂ ನಂಬಲಿಲ್ಲ. ಎಷ್ಟೋ ಜನ ನಲವತ್ತರ ಹೊತ್ತಿಗೆ ಮದುವೆ ಆಗ್ತಾರೆ. ಒಟ್ನಲ್ಲಿ ಅವನಿಗಿನ್ನೂ ಕಂಕಣ ಬಲ ಕೂಡಿಬಂದಿಲ್ಲ. ಯಾವಾಗ ಬರುತ್ತೊ' ಅನ್ನುತ್ತ ತನ್ಮಯಿ ಮುಖ ನೋಡಿದರು.